## ಕರ್ನಾಟಕದ ಆಧ್ಯಾತ್ಮಿಕ ಪರಂಪರೆ

# ಮುಕ್ತಾಯಕ್ಕ

ಜಿ.ವಿ. ಜಯಾ ರಾಜಶೇಖರ್

**ಬ**ಸವಯುಗವೆಂದು ಕರೆಯಲ್ಪಡುವ ೧೨ನೇ ಶತಮಾನದಲ್ಲಿ ಶ್ರೀಬಸವಣ್ಣನವರಿಂದ ವ್ಯಕ್ತಿಸ್ವಾತಂತ್ರ್ಯದ ಅರಿವನ್ನು ಪಡೆದ ಜನರು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಸತ್‌ಫಲವೇ ವಚನಸಾಹಿತ್ಯ. ಆತ್ಮವಿಮರ್ಶೆಯಷ್ಟೇ ವ್ಯಾಪಕವಾಗಿ ಸಮಾಜವಿಮರ್ಶೆಯನ್ನೂ ವಚನ ವಾಙ್ಮಯದಲ್ಲಿ ಕಾಣಬಹುದು. ಬೇರೊಂದು ಪ್ರಕಾರದ ಅನುಕರಣೆಯಿಲ್ಲದೆ ದೇಶೀಯ ಭಾಷೆಯಲ್ಲಿ ಅಭಿವ್ಯಕ್ತಗೊಂಡ ಈ ಸಾಹಿತ್ಯಧಾರೆ ರಾಜರ ಆಸ್ಥಾನ ಮತ್ತು ಪಂಡಿತವರ್ಗದ ಸೆರೆಯಿಂದ ಭೇದಿಸಿಕೊಂಡು, ಜನ ಸಾಮಾನ್ಯರೆಡೆಗೆ ಭೋರ್ಗರೆದು ಹರಿದು ಬಂದ ಕಾವ್ಯಭಾಗೀರಥಿ.


ಅಂದಿನ ಕಾಲದಲ್ಲಿ ವರ್ಣಭೇದ, ಲಿಂಗಭೇದ ನಿರಾಕರಣೆಗಳಂತಹ ವಿಚಾರಗಳು ಸ್ಫೋಟಗೊಂಡದ್ದು ಸಾಮಾನ್ಯವಿಚಾರವಲ್ಲ. ಈ ಇಪ್ಪತ್ತೊಂದನೆ ಶತಮಾನದಲ್ಲೂ ವೈಚಾರಿಕತೆ, ಕಾರ್ಯರೂಪಕ್ಕೆ ಬಂದಿಲ್ಲದಿರುವುದನ್ನು ಗಮನಿಸಬಹುದು. ಅಂದು ಪುರುಷರಷ್ಟೇ ಪ್ರಧಾನವಾಗಿ ಸ್ತ್ರೀಯರು, ಕುಲಜರಂತೆಯೇ ಅಂತ್ಯಜರು, ಪ್ರಭುಗಳಂತೆಯೇ ಪ್ರಜೆಗಳು ಬಾಳಿದ್ದು ಜಗತ್ತಿನ ಇತಿಹಾಸದಲ್ಲಿಯೇ ಬಹುಶಃ ಏಕೈಕ ಉದಾಹರಣೆ.

ಶರಣಸಮಾಜದಲ್ಲಿ ಸ್ತ್ರೀಪುರುಷರೆಂಬ ಭೇದವೇ ಇರಲಿಲ್ಲ. ಪುರುಷರ ಪೌರುಷವನ್ನು ಸ್ತ್ರೀಯರು ಒಪ್ಪಿಕೊಂಡು, ಸ್ತ್ರೀಯರ ಮಾರ್ದವತೆ, ಅಂತಃಕರಣಗಳನ್ನು ಪುರುಷರು ಅಂಗೀಕರಿಸಿ– ಆ ಪುರುಷತ್ವ, ಸ್ತ್ರೀತ್ವಗಳನ್ನು ತಮ್ಮಲ್ಲಿಯೂ ಅಳವಡಿಸಿಕೊಂಡು ಸಾಧನಾ ರಂಗವನ್ನು ಪ್ರವೇಶಿಸಿ, ಸಾಧಿಸಿ, ಸಿದ್ಧಿ ಪಡೆಯುತ್ತಾರೆ.

ಯಾರೂ ಕೇವಲ ಪುರುಷರಲ್ಲ, ಯಾರೂ ಕೇವಲ ಸ್ತ್ರೀಯರಲ್ಲ. ಪುರುಷನಲ್ಲಿ ಸ್ತ್ರೀತ್ವ, ಸ್ತ್ರೀಯಲ್ಲಿ ಪುರುಷತ್ವ ಇರುವುದಾಗಿ ವಿಜ್ಞಾನವು ಹೇಳುತ್ತದೆ. ಅರ್ಧನಾರೀಶ್ವರನ ಕಲ್ಪನೆಯನ್ನೇ ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಪೂರ್ಣ ಪುರುಷನೆಂದರೆ ಪರಮಾತ್ಮನೊಬ್ಬನೇ, ಅವನನ್ನು ಲಿಂಗರೂಪದಲ್ಲಿ ಧರಿಸಿದ ಸ್ತ್ರೀಪುರುಷರೆಲ್ಲಾ ಅವನ ಸತಿಯರು. ಇದನ್ನೇ **ಲಿಂಗಪತಿ, ಶರಣಸತಿ** ಎನ್ನುತ್ತಾರೆ.

ಅಂದು ನಡೆದ ಆಂದೋಲನಗಳಲ್ಲಿ ಸಾಹಿತ್ಯಿಕ ಆಂದೋಲನವೂ ಒಂದು ಕವಲು. ಏಕಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಚನಕಾರ್ತಿಯರು ಬುಗ್ಗೆಗಳಂತೆ ಆವಿರ್ಭವಿಸಿದುದು ವಿಸ್ಮಯವೇ ಸರಿ. ಇದಕ್ಕೆ ಶರಣರು ಸ್ತ್ರೀಯರ ಸಮಾನತೆಗೆ, ಏಳಿಗೆಗೆ ಕೊಟ್ಟ ಮಹತ್ವ ಒಂದು ಕಾರಣವಾದರೆ, ಅವರು ಕೊಟ್ಟ ಗರಿಷ್ಠ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಬೆಳೆಯಬೇಕೆಂಬ ಹಂಬಲ ಸ್ತ್ರೀಯರಲ್ಲೂ ಮೂಡಿದ್ದು ಮತ್ತೊಂದು ಕಾರಣ. ಪರಸ್ಪರ ಕೊಡುಕೊಳ್ಳುವಿಕೆ ಈ ಸೋಜಿಗಕ್ಕೆ ಕಾರಣ.

ಇಂತಹ ಪುಣ್ಯಕಾಲದಲ್ಲಿ ಇದ್ದವಳು ಮುಕ್ತಾಯಕ್ಕ. ಇವಳ ಜೀವನದ ಚಾರಿತ್ರಿಕ ಅಂಶಗಳು ಕೆಲಮಟ್ಟಿಗೆ ಕಂಡುಬರುವುದು 'ಗ್ರಂಥಗಳಲ್ಲಿ ಗ್ರಂಥ ರಾಜ' 'ನೆಲದ ಅಚ್ಚರಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ **'ಶೂನ್ಯಸಂಪಾದನೆ'** ಮತ್ತು ಆ ಪರಂಪರೆಗೆ ಸೇರಿದ ಕೆಲವು ಕೃತಿಗಳಲ್ಲಿ.



ಅಜಗಣ್ಣ–ಮುಕ್ತಾಯಕ್ಕ

ಮುಕ್ತಾಯಕ್ಕನ ತವರೂರು ಗದಗದ ಬಳಿಯ ಲಕ್ಕುಂಡಿ. ಅಲ್ಲಿಯ ಕೃಷಿ ಕಾಯಕದ ಸದಾಚಾರಸಂಪನ್ನ ಶರಣ ದಂಪತಿಗಳಿಗೆ ಜನಿಸಿದ ಮುಕ್ತಾಯಕ್ಕನಿಗೆ ಅಜಗಣ್ಣನೆಂಬ ಸೋದರನಿದ್ದನು. ಆದರ್ಶಮಯ ಸೋದರಪ್ರೇಮ ಈ ಅಣ್ಣ, ತಂಗಿಯರದು.

ಅಜಗಣ್ಣ ಅನುಭಾವಿ, ಬಹಿರಂಗದ ಲೋಕಪ್ರವೃತ್ತಿಯನ್ನು ಅಂತರಂಗದಲ್ಲಿರಿಸಿಕೊಂಡಿದ್ದವನು. ಸುಖ–ದುಃಖಗಳಲ್ಲಿ ಸಮಾಧಾನಿಯಾಗಿ, ನಿಶ್ಶಬ್ದ ಬ್ರಹ್ಮದ ನಿರುಪಾಧಿಕ ಸ್ಥಿತಿಯ ಸಿದ್ಧಿಯಲ್ಲಿ ತೃಪ್ತನಾಗಿದ್ದವನು, ಅಂದರೆ ಗುಪ್ತಭಕ್ತನಾಗಿ ಮೌನದಲ್ಲಿದ್ದವನು.

ಮುಕ್ತಾಯಕ್ಕ ಅಣ್ಣನನ್ನು ಗುರುಸ್ಥಾನದಲ್ಲಿಟ್ಟು ಸಾಧನೆ ಮಾಡುತ್ತಿದ್ದವಳು. ಅವಳನ್ನು ರಾಯಚೂರಿನ ಬಳಿಯ "ಮೊಸಳೆಕಲ್ಲು" ಎಂಬ ಊರಿಗೆ ಕೊಟ್ಟು ಮದುವೆ ಮಾಡಲಾಗಿತ್ತೆಂದು ತಿಳಿದುಬರುತ್ತದೆ. ಈ ಸೋದರ–ಸೋದರಿಯರ ಹೆಸರುಗಳಲ್ಲಿ ಒಂದು ರೀತಿಯ ಅಲೌಕಿಕತೆ ಇದೆ. 'ಅಜಗ' ಎಂದರೆ ಈ ಜಗದವನಲ್ಲ. 'ಮುಕ್ತಾಯಿ' ಎಂದರೆ ಮುಕ್ತಳಾದವಳು. ಇವರು ಅನ್ವರ್ಥನಾಮದ ಅಪರೂಪದ ಸೋದರ–ಸೋದರಿಯರು.

ನಿಶ್ಶಬ್ದಬ್ರಹ್ಮವೇ ತಾನಾಗಿದ್ದ ತನ್ನ ಅಧ್ಯಾತ್ಮಗುರುವಿನ ಹೆಸರನ್ನೇ 'ಅಜಗಣ' – 'ಅಜಗಣ್ಣ ತಂದೆ' ಎಂಬ ಮುದ್ರಿಕೆಯನ್ನಿರಿಸಿಕೊಂಡು ರಚಿಸಿರುವ ಮುಕ್ತಾಯಕ್ಕನ ಮೂವತ್ತೇಳು ವಚನಗಳು ಸಿಕ್ಕಿವೆ.

ಶೂನ್ಯಸಂಪಾದನೆ ಗ್ರಂಥದಲ್ಲಿ, ಪ್ರಥಮೋಪದೇಶದ ನಂತರ ಚಿತ್ರಿತವಾಗುವ ಮೊದಲ ವ್ಯಕ್ತಿಯಾಗುವ ಸೌಭಾಗ್ಯ ಮುಕ್ತಾಯಕ್ಕನದು. ಇದನ್ನು ಶಿವಶರಣರು ಹೆಣ್ಣುಮಕ್ಕಳಿಗೆ ಕೊಟ್ಟಿರುವ ಆದ್ಯತೆಯ ಪ್ರತೀಕವೆಂದೂ ತಿಳಿಯಬಹುದು.

ಆ ಗ್ರಂಥದಲ್ಲಿ ಮುಕ್ತಾಯಕ್ಕ- ಅಲ್ಲಮಪ್ರಭುವಿನ ನಡುವೆ ನಡೆಯುವ ಸೂಕ್ಷ್ಮಾತಿಸೂಕ್ಷ್ಮ ತಾತ್ತ್ವಿಕ ಮೌಲ್ಯಗಳ ಮಂಥನವಾದ, ಅನುಭಾವದ

---

ಬೆಂಗಳೂರು ನಿವಾಸಿಯಾದ ಲೇಖಕರು ವಚನಸಾಹಿತ್ಯದಲ್ಲಿ ಸಂಶೋಧನೆ ನಡೆಸಿದ್ದಾರೆ; ಉತ್ತಮ ಸಾಹಿತಿಗಳು.

ರಹಸ್ಯವನ್ನು ಅನಾವರಣಗೊಳಿಸುವ, ಉಪನಿಷತ್ತಿಗೆ ಸರಿಮಿಗಿಲೆನಿಸುವ ಸಂವಾದವನ್ನು ಓದಿಯೇ ಕೇಳಿಯೇ ರಸಾನಂದ ಹೊಂದಬೇಕು. ಓದುತ್ತಿದ್ದರೆ ಆ ವ್ಯಕ್ತಿಗಳು ಜೀವಂತವಾಗಿ ಬಂದು ನಮ್ಮ ಮನೋರಂಗ ಮಂದಿರದಲ್ಲಿ ನಾಟ್ಯವಾಡುತ್ತಾರೆ. ಕರ್ನಾಟಕದಲ್ಲೇ ಏಕೆ ಇಡೀ ಭಾರತದಲ್ಲಿಯೇ ಗುರುವನ್ನು ಸಾಕ್ಷಿಕಟ್ಟೆಯಲ್ಲಿ ನಿಲ್ಲಿಸಿ, ತಾನು ನ್ಯಾಯಾಧೀಶ ಸ್ಥಾನದಲ್ಲಿ ಕೂರುವ ಶಿಷ್ಯರ ಉದಾಹರಣೆ ಬಹುಶಃ ಇದನ್ನು ಬಿಟ್ಟರೆ ಮತ್ತೊಂದು ಇರಲಾರದು. ಈ ವಾದವನ್ನು ಕೇಳಿ ವಿಸ್ಮಿತರಾಗದ ವಿದ್ವಾಂಸರಿಲ್ಲ; ಆನಂದಪಡದ ಸಾಹಿತ್ಯರಸಿಕರಿಲ್ಲ. ಅರಿವಿನ ಪರಮಗಮ್ಯ ಎನಿಸಿದ ಅಲ್ಲಮಪ್ರಭುದೇವನನ್ನು ಸಾಮಾನ್ಯಳಾದೊಬ್ಬ ಗ್ರಾಮೀಣ ಹೆಣ್ಣುಮಗಳು ಒರೆಹಚ್ಚಿ ನೋಡುವ ಪ್ರಸಂಗ ಬೆರಗು ಮೂಡಿಸುವಂತಹುದು.

ಮುಕ್ತಾಯಕ್ಕನ ಅಣ್ಣ ಅಜಗಣ್ಣ ಲಿಂಗೈಕ್ಯನಾಗಿದ್ದಾನೆ. ತಂಗಿ ಆತನ ಅಗಲಿಕೆಯಿಂದ ಶೋಕಾರ್ತಳಾಗಿದ್ದಾಳೆ. ಅವಳ ದುಃಖ ಲೌಕಿಕ ರೀತಿಯದಲ್ಲ; ತತ್ತ್ವಮೂಲವಾದದ್ದು. ಅಣ್ಣನ ಗುಪ್ತಯೋಗವನ್ನು ತಾನು ಅರಿಯಲಿಲ್ಲವಲ್ಲ, ಆತ ಬದುಕಿದ್ದಾಗಲೆ ಜ್ಞಾನದ ಪೂರ್ಣಸ್ವರೂಪವನ್ನು ತಿಳಿಯದೆ ಹೋದೆನಲ್ಲ, ಎಂದು ತಳವಳಗೊಂಡು ಕಳವಳಕ್ಕೀಡಾಗಿದ್ದಾಳೆ. ತನ್ನ ಅರಿವಿನ ಕಣ್ಣೇ ಕುರುಡಾದಂತಾಗಿ ದುಃಖ ಸಹಿಸಲಾರದೆ ಮುಕ್ತಾಯಕ್ಕ ಶೋಕಯೋಗಿನಿಯಾಗಿ ಪರಿತಾಪ ಪಡುತ್ತಿದ್ದಾಳೆ. ಅವಳ ಮನದ ಮೊರೆಯೇ, ಹೃದಯದ ಕೊರಗೇ ಪ್ರಭುದೇವನನ್ನು ಅವಳಿರುವಲ್ಲಿಗೆ ಕರೆತಂದಿರಬೇಕು.

ಜಗದ್ಭರಿತ ಜಂಗಮನಾದ ಅಲ್ಲಮಪ್ರಭು ಪರಿವ್ರಾಜಕನಾಗಿ ಜಗಹಿತಾರ್ಥವಾಗಿ ದೇಶ ಪರ್ಯಟನೆ ಮಾಡುತ್ತಿದ್ದಾಗ ದುಃಖಾರ್ತಳಾಗಿದ್ದ ಮುಕ್ತಾಯಕ್ಕನನ್ನು ಸಂದರ್ಶಿಸಿ, ಆಕೆಯನ್ನು ಸಂತೈಸಿ, ಅವಳ ಪ್ರಶ್ನೆಗಳಿಗೆಲ್ಲಾ ಸಮಾಧಾನಕರವಾದ ಸೂಕ್ತ ಉತ್ತರಗಳನ್ನು ನೀಡಿ, ನಿಜದ ನೆಲೆಯನ್ನು ಬೋಧಿಸಿ, ಅವಳು ಶೂನ್ಯವನ್ನು ಸಂಪಾದಿಸಿಕೊಳ್ಳಲು ತನ್ನ ಕೃಪಾಹಸ್ತವನ್ನು ನೀಡಿದ ವಿವರ ಶೂನ್ಯಸಂಪಾದನೆ ಗ್ರಂಥದಲ್ಲಿದೆ.

ಇಲ್ಲಿ ತತ್ತ್ವವನ್ನು ಮುಕ್ತಾಯಕ್ಕ ಬಹುಮುಖವಾಗಿ ಚರ್ಚಿಸಿದ್ದಾಳೆ. ಅದರಲ್ಲಿ ಗುರುತತ್ತ್ವವನ್ನು ಕುರಿತ ಸಣ್ಣಭಾಗವನ್ನಿಲ್ಲಿ ಕಾಣಿಸುತ್ತೇನೆ. ಇಲ್ಲಿ ತತ್ತ್ವಚರ್ಚೆ ನಡೆಯುತ್ತಿದ್ದಾಗ, ಅಂತರಂಗದಲ್ಲಿರುವ ನಿಷ್ಕ್ರಿಯ ಲಿಂಗವನ್ನು ಅರಿಯದಿದ್ದರೆ ಕ್ರಿಯಾಲಿಂಗವನ್ನು ಬಹಿರಂಗದಲ್ಲಿ ಹಿಡಿದು ಪೂಜಿಸುವುದು ವ್ಯರ್ಥ—ಮುಂತಾಗಿ ಅಲ್ಲಮಪ್ರಭು ಹೇಳಿದ ನಂತರ– ಮುಕ್ತಾಯಿ ಹೀಗೆ ಹೇಳುತ್ತಾಳೆ :

"ತನುವಿನೊಳಗೆ ತನುವಾಗಿ, ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ, ಕೆಲವರಿಗೆ ಅರಿಯಬಪ್ಪುದೆ? ಅಂತರಂಗದಲ್ಲಿ ಅದೆ ಎಂದಡೇನು ಹೇಳಾ? ಮನ ಮುಟ್ಟಿ ಕಾಣಬಾರದು. ಸಾಕಾರವಲ್ಲದ ನಿರಾಕಾರಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು. ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ, ಎನ್ನ ಅಜಗಣ್ಣನಿಕ್ಕಿದ ದಸರಿದೊಡಕಿಂಗೆ ಬೆರಗಾದೆನಯ್ಯ ಪ್ರಭುವೆ."

"ಸ್ವಾಮಿ, ಲಿಂಗವು ತನುವಿನೊಳ್ಗೆ ತನು, ಮನದೊಳಗೆ ಮನ, ಪ್ರಾಣದೊಳಗೆ ಪ್ರಾಣವಾಗಿದೆಯೆಂದರೆ ಎಲ್ಲರಿಗೂ ಗೋಚರವಾಗುತ್ತದೆಯೆ? ತಮ್ಮ ತನುಮನಗಳಲ್ಲಿರುವ ಲಿಂಗವನ್ನು ಎಷ್ಟು ಜನ ಅರಿತಿದ್ದಾರೆ? ಹೊರ ಮೈಮೇಲೆ ಲಿಂಗವನ್ನು ಧರಿಸಿ ಒಳಮೈಯಲ್ಲಿ ಲಿಂಗವಿದೆ ಎಂಬುದನ್ನು ತಿಳಿದವರಿರಬಹುದು. ಪ್ರಾಣವೇ ಲಿಂಗವಾದವರನ್ನು ಕಾಣೆ."

"ಲಿಂಗಾನುಭಾವ, ಲಿಂಗಾನಂದ ಪರವಶತೆ ಎಷ್ಟು ಜನರಿಗೆ ಸಾಧ್ಯ? ತನು–ಮನ–ಪ್ರಾಣ ಶುದ್ಧವಾಗದೆ ಲಿಂಗಸಾಮರಸ್ಯ ಸಾಧ್ಯವಾಗದು. ಲಿಂಗಾಂಗ ಸಾಮರಸ್ಯವಿಲ್ಲದೆ, ಜ್ಞಾನ–ಕ್ರಿಯೆಗಳು ದಾಸೋಹಂ ಭಾವದಲ್ಲಿ ಒಂದಾಗದೆ ಅಂತರಂಗ–ಬಹಿರಂಗ ಒಂದಾಗದು."

"ಒಳಗಿದ್ದ ಪ್ರಾಣಲಿಂಗವೆ ಉಪಾಸನೆಗೆ ಕ್ರಿಯಾಲಿಂಗವಾಗಿದೆ. ಈ ಪ್ರಾಣಲಿಂಗ– ಕ್ರಿಯಾಲಿಂಗಗಳ ಸನ್ನಿಹಿತವೇ ಭಾವಲಿಂಗ. ಬಹಿರಂಗವನ್ನು ಮಾಯೆ – ಮರವೆ ಎಂದು ಅಲ್ಲಗಳೆದು ತಿರಸ್ಕರಿಸಬಾರದು."

"ತನು –ಮನ– ಪ್ರಾಣವೆಂಬ ತ್ರಿವಿಧಾಂಗಗಳನ್ನು ತಿಳಿಯಾಗಿಸಿ ಸತ್, ಚಿತ್ ಆನಂದ ಸ್ವರೂಪವಾದ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಅನುಗೊಳಿಸಬೇಕಾದರೆ ಗುರುಕರುಣೆ ಬೇಕು. ಗುರುವಿನಲ್ಲಿ ಸ್ವಾಯತವಾಗದೆ ಲಿಂಗ ಸನ್ನಿಹಿತವಾಗದು. ಗುರುಪ್ರಸಾದವಿಲ್ಲದೆ ಮನ ಪ್ರಾಣ ಶುದ್ಧವಾಗವು, ತಾಪತ್ರಯಗಳು ತೊಲಗವು. ತಾಪತ್ರಯಗಳು ಹರಿಯದೆ ಈ ಕಗ್ಗಂಟು ಬಿಚ್ಚದು."

ಅದಕ್ಕೆ ಅಲ್ಲಮಪ್ರಭು ಹೀಗೆ ಹೇಳುತ್ತಾನೆ:

"ತೆರಹಿಲ್ಲದ ಘನವು ಕುರುಹಿಂಗೆ ಬಾರದೆ ಮುನ್ನ ತೋರಿದವರಾರು ಹೇಳಾ ಮಹಾಲಿಂಗೈಕ್ಯವನು..... ಗುಹೇಶ್ವರಲಿಂಗವು ತಾನೆ ನೋಡಾ."

ಅಂದರೆ ತೆರಹಿಲ್ಲದ ಆ ಘನವಸ್ತು ಕುರುಹಾಗಿ ಅಂದರೆ ಲಿಂಗವಾಗಿ ಬಂದಾಗ ಮಾತ್ರ ತೋರಬಹುದಲ್ಲದೆ, ಅದಕ್ಕೆ ಮೊದಲು ಆ ಮಹಾಲಿಂಗೈಕ್ಯವನ್ನು ತೋರಿಸಲು ಯಾರಿಗೆ ಸಾಧ್ಯ? ಮೂಲವನ್ನು ಅಂದರೆ ಬೇರನ್ನು ಬಿಟ್ಟು ಚಿಗುರನ್ನು ನೋಡುತ್ತಿದ್ದೀಯೆ. ಸ್ವಲ್ಪ ಹಿಂದಕ್ಕೆ ಹೋಗಿ ನೋಡು, ನೋಡಿ ಮಾತನಾಡು – ಇದು ಅಲ್ಲಮಪ್ರಭುವಿನ ಮೇಲಿನ ಮಾತುಗಳ ಅರ್ಥ. ಅವನು ಮಾತು ಮುಂದುವರಿಸುತ್ತಾನೆ:

"ಗುರು–ಲಿಂಗ– ಜಂಗಮ– ಪರಬ್ರಹ್ಮ– ಪರವಸ್ತು–ಘನ, ಎಂದು ಅನೇಕ ಹೆಸರುಗಳಿಂದ ಹೇಳುವೆಯಲ್ಲಾ, ಅಣುರೇಣುತೃಣಕಾಷ್ಠಗಳಲ್ಲೂ ನಿಬಿಡವಾಗಿ ತುಂಬಿ ಪರಿಪೂರ್ಣವಾದ ಆ ಪರವಸ್ತು ಮೊದಲು ಏನಾಗಿತ್ತು? ಈ ಸೃಷ್ಟಿಯೇ ಆಗದ ಮುನ್ನ ಈ ಸೃಷ್ಟಿಯನ್ನು ಆ ಘನವಸ್ತು ಕಾಣದಿದ್ದಾಗ ಇದು ಲಿಂಗ–ಇದು ಲಿಂಗೈಕ್ಯವೆಂದು ತೋರಿಸಿದವರಾರು? ಏನೂ ಅಗಿರದ ಆ ವಸ್ತು ಕುರುಹಾಗಿ ಬಾರದ ಮುನ್ನ ಅದನ್ನು ತೋರಿದವರಾರು? ಲಿಂಗವಾದ ಮೇಲೆ ತೋರುವವರಿದ್ದಾರೆ."

"ಪ್ರಾಣಲಿಂಗವನ್ನು ಮನಸ್ಥಲದಿಂದ ಕರಸ್ಥಲಕ್ಕೆ ಇಷ್ಟಲಿಂಗ (ಕ್ರಿಯಾಲಿಂಗ) ವನ್ನಾಗಿ ತಂದು ಕೊಡುವವನು ಗುರು. ಹೀಗಿರುವಾಗ ಪ್ರಾಣಲಿಂಗವನ್ನು ಮತ್ತು ಇಷ್ಟಲಿಂಗವನ್ನು ಬೇರೆ ಬೇರೆ ಎಂದು ಹೇಳಬಹುದೆ? ಅರಿವು ಸ್ವಂತದ್ದೇ ಆದಾಗ ಮರೆವು ನಷ್ಟವಾಗುತ್ತದೆ. ಆಗ ಗುರು ಬೇರೆ ಅಲ್ಲ, ಲಿಂಗ ಬೇರೆ ಅಲ್ಲ."

ಹೀಗೆಯೇ, ಮುಕ್ತಾಯಿ, ಅಲ್ಲಮಪ್ರಭುಗಳ ನಡುವೆ ಗುರುತತ್ತ್ವದ ಬಗೆಗೆ ವಾದ ನಡೆದು ಮುಂದೆ ನಿಶ್ಶಬ್ದ ಬ್ರಹ್ಮದ ಕಡೆಗೆ ಮುಂದುವರಿಯುತ್ತದೆ.

ಪ್ರಭುದೇವನೊಂದಿಗೆ ತಾತ್ತ್ವಿಕ ವಾದ ನಡೆಸಿ ಆತನ ಅಭಿಪ್ರಾಯಗಳನ್ನು ದಿಟ್ಟತನದಿಂದ ಎದುರಿಸಿ, ಅರಿತು, ಅವನ ನಿಲುವಿಗೆ ಮಣಿದು ಸಾಧನಾ ಮಾರ್ಗದಲ್ಲಿ ಮುನ್ನಡೆದು, ಸಾಧಕಿಯರಲ್ಲಿ ಅಗ್ರಪಂಕ್ತಿಯಲ್ಲಿರುವ ಮುಕ್ತಾಯಕ್ಕನ ಧೀಮಂತ ನಿಲುವು ಎಂತಹವರೂ ಮೆಚ್ಚಬೇಕಾದದ್ದು.